ಮೂಲ ಸಿದ್ಧಾಂತಕ್ಕೆ ಇನ್ನೂ ತೂಗು ಹಾಕಿಕೊಂಡಿರುವುದು ಅಪಹಾಸ್ಯವಷ್ಟೆ ಅಲ್ಲದೆ ಅದು ನಮ್ಮ ಚರಿತ್ರೆಯ ಒಂದು ವಿಪರ್ಯಾಸ ಕೂಡ.

ಈ ವಿವರಗಳನ್ನು ವೀಣಾ ಮತ್ತು ಉಮಾಶಂಕರ್ ಜೊತೆ ನಾನು ಹಲವು ಸಂದರ್ಭಗಳಲ್ಲಿ ಚರ್ಚಿಸಿದ್ದರಿಂದ, ಬಿಲಾಲ್ ಹೇಳಿದ, 'ಆರ್ಯ ಕಣಿವೆ'ಯು ಒಂದು ವೈಶಿಷ್ಟ್ಯವೆ ಆಗಿರಲು ಸಾಧ್ಯ ಎನಿಸಿ, ನಮ್ಮಲ್ಲಿ ಹೆಚ್ಚಿನ ಕುತೂಹಲ ಹುಟ್ಟಿಸಿತ್ತು. ಅದನ್ನು ನೋಡಲೇಬೇಕೆಂದು ತೀರ್ಮಾನಿಸಿ ಟ್ಯಾಕ್ಸಿ ಚಾಲಕನ ಜೊತೆ ಮೊದಲೆ ಚರ್ಚಿಸಿ ಅಲ್ಲಿಗೆ ನಮ್ಮನ್ನು ಕರೆದೊಯ್ಯುವ ಬಗ್ಗೆ ಖಚಿತಪಡಿಸಿಕೊಂಡೆವು. ಮಾರನೆಯ ದಿನ ಮುಂಜಾನೆ ನಮ್ಮ ಪ್ರಯಾಣ ಕಾರ್ಗಿಲ್‌ನಿಂದ ಪ್ರಾರಂಭವಾಯಿತು. ಆರ್ಯರನ್ನು ಹುಡುಕಿ ಹೊರಟ ಆ ಯಾನವು ಚರಿತ್ರೆಯ ಹಲವು ದುರಂತಗಳ ಪರಿಚಯಕ್ಕೆ ದಾರಿಯಾಗುತ್ತದೆ ಎಂದು ನಾನು ಊಹಿಸಿರಲಿಲ್ಲ.

ಬಿಲಾಲ್ ಹೇಳಿದ ಹಾಗೆ ಆರ್ಯಕಣಿವೆಗೆ ಹೋಗುವ ಹಾದಿ ದುರ್ಗಮವೂ, ಕಠಿಣವೂ ಆಗಿತ್ತಾದರೂ ದಾರಿಯುದ್ದಕ್ಕೂ ಕಂಡ ಅದ್ಭುತವಾದ ದೃಶ್ಯ ಸೌಂದರ್ಯ ಅದೆಲ್ಲವನ್ನೂ ಮರೆಸುತ್ತಿತ್ತು. ಹಲವಾರು ಕಡೆ ಸೈನಿಕರ ಸಾಲು ವಾಹನಗಳಿಂದ ಅಡ್ಡಿಯೂ ಆಗಿತ್ತು. ಆದರೆ ಆ ಅಡಚಣೆಗಳು ಸುತ್ತಲೂ ತುಂಬಿದ್ದ ಪ್ರಕೃತಿ ಸೌಂದರ್ಯವನ್ನು ನಿಂತು ಸವಿಯಲು ಒದಗಿದ ಅವಕಾಶವೆಂದೆ ಖುಷಿ ಪಟ್ಟೆವು. ಸುಮಾರು ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಒಂದು ಕಿರಿದಾದ ಆ ಕಣಿವೆಯ ಹಾದಿಯಲ್ಲಿ ನದಿಯಗುಂಟ, ಅದರ ಮಟ್ಟದಲ್ಲಿಯೆ ನಮ್ಮ ವಾಹನ ಸಾಗುತ್ತಿದ್ದಂತೆ, ಚಾಲಕ ಎದುರಿಗೆ ಸುಮಾರು 400 ಮೀಟರುಗಳ ದೂರದಲ್ಲಿ ಪರ್ವತದ ಮಧ್ಯದಲ್ಲಿದ್ದ ಕೆಲವು ಮನೆಗಳ ಗುಂಪಿನತ್ತ ಕೈತೋರಿಸಿ, 'ಅದೇ ದಾಹ್, ಆರ್ಯರ ಹಳ್ಳಿ' ಎಂದ. ನಾವೆಲ್ಲರೂ ಉತ್ಸುಕರಾಗಿ ಅತ್ತ ನೋಡಿದೆವು. ಬೋಳು ಬೋಳಾದ ಬೆಟ್ಟದ ಎದೆಗೆ ಅಂಟಿಕೊಂಡು ನಿಂತಿದ್ದ ಆ ಹಳ್ಳಿಯಲ್ಲಿ ಬರೀ ಇಟ್ಟಿಗೆ ಮತ್ತು ಮಣ್ಣಿನಿಂದ ಕಟ್ಟಿದ ಬಹುಪಾಲು ಮನೆಗಳು ಪಾಳು ಬಿದ್ದಂತೆ ಕಾಣುತ್ತಿದ್ದವು. ಅವೆಲ್ಲವುಗಳ ಮೈ ದೂಳು ತುಂಬಿಕೊಂಡು ಯಾವುದೋ ಯುದ್ಧ ಭೂಮಿಯಲ್ಲಿ ಸಿಕ್ಕಿಕೊಂಡ ಮನೆಗಳಂತೆ ಕಂಡವು. ಬಹುಪಾಲು ಮನೆಗಳ ಮೇಲೆ ಸಣ್ಣ ಮರದ ದಿಂಡುಗಳನ್ನು ಹಾಸಿ, ಅವುಗಳ ಮಧ್ಯ ಸಣ್ಣ ಸಣ್ಣ ಮರದ ಕೋಲುಗಳನ್ನಿಟ್ಟು ಸೊಪ್ಪುಹೊದಿಸಿ, ಮೇಲೆ ಮಣ್ಣನ್ನು ಸವರಿ ಮುಚ್ಚಿದ ಸೂರುಗಳು. ವಿಚಿತ್ರವೆಂದರೆ ನಾವು ಹತ್ತಿರವಾಗುತ್ತಿದ್ದಂತೆ ಆ ಹಳ್ಳಿಯಲ್ಲಿ ಯಾರೂ ಇದ್ದ ಹಾಗೆ ಕಾಣಲಿಲ್ಲ.

ಚಾಲಕನಲ್ಲಿ ವಿಚಾರಿಸಿದರೆ ಎಲ್ಲರೂ ಆ ಸಮಯದಲ್ಲಿ ಕೆಲಸಕ್ಕೆ ಹೋಗಿರುತ್ತಾರೆ, ಯಾರೂ ಸಿಗುವುದಿಲ್ಲ ಎಂದ. 'ಅಲ್ಲಿ ಮಕ್ಕಳಾದರೂ ಇರಲೇಬೇಕಲ್ಲ' ಎಂದೆವು. ಅದಕ್ಕೆ 'ಅಲ್ಲಿರುವ ಜನರೆ ಕಡಿಮೆ. ಇದ್ದವರೆಲ್ಲರೂ ಹೊರಗೆ ಹೋಗಿರುತ್ತಾರೆ. ಚಿಕ್ಕ ಮಕ್ಕಳು ಒಳಗೆ ಅಜ್ಜಿಯರ ಜೊತೆ ಇರುವ ಸಾಧ್ಯತೆ ಇದೆ. ಅವರನ್ನು ಹುಡುಕುವುದು ಕಷ್ಟ' ಎಂದ. ನಮಗೆ ನಂಬಿಕೆ ಬರಲಿಲ್ಲ. ಅಲ್ಲಿಯವರೆಗೂ ಬಂದು ಆ ಜನರನ್ನು ಕಾಣದೆ ಹೋಗುವುದೆಂದರೆ? ಅದಕ್ಕಾಗಿ ಅವರು ಕೆಲಸಕ್ಕೆ ಹೋಗಿರುವ ಜಾಗಕ್ಕೇ ಹೋಗಿ ಅವರನ್ನು ಕಾಣುವ ಎಂದೆವು. ಆತ ಅರ್ಧ ಮನಸ್ಸಿನಿಂದ ಆ ಬೆಟ್ಟವನ್ನು ಬಳಸಿ ಹೋಗುತ್ತಿದ್ದ ದಾರಿಯಲ್ಲಿ ಮುಂದೆ ಹೊರಟ. ವಾಹನವನ್ನು ಉಸುಕು ಮತ್ತು ಬಿಳಿ ದೂಳು ತುಂಬಿದ ಅತೀ ಅತಂತ್ರ ದಾರಿಯಲ್ಲಿ ಹತ್ತಿಸತೊಡಗಿದ. ಹಾಗೆ ಸುಮಾರು ಒಂದು ಅಥವಾ ಎರಡು ಕಿ.ಮೀ.ನಷ್ಟು ದೂರ ಕ್ರಮಿಸಿದೆವು. ಕೊನೆಗೆ ಬೆಟ್ಟದ ಹಿಂದೆ ಬಂದು ಸೇರುತ್ತಿದ್ದಂತೆ ನಮ್ಮ ಕಣ್ಣುಗಳು ಅರಳಿದವು!

ಕೇವಲ ಬೋಳು ಬೆಟ್ಟಗಳೇ ತುಂಬಿದ್ದ ಕಣಿವೆಯಗುಂಟ ಹಾದು ಬಂದಿದ್ದ ನಮಗೆ ಅಲ್ಲಿ